ಅಸಲು ದಾವಾ ಸಂಖ್ಯೆ .247-2014

ಪಿ.ಡಬ್ಲ್ಯೂ- 1

ದಿಃ 16-12-2019

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಪ್ರತಿ ವಾದಿ ಪರ ವಕೀಲರಿಂದ ಃ-

ನಿಪಿ 33 ರ ಕ್ರಯಪತ್ರದಲ್ಲಿ ಉತ್ತರಕ್ಕೆ ತೋರಿಸಿರುವ ಗೋಣ್ಯಪ್ಪ ನನ್ನ ಅಜ್ಜ ಎಂದರೆ ಸರಿ . ನಿಪಿ 34 ರಂತೆ ನಾನು ಯಲ್ಲಪ್ಪನ ಮಕ್ಕಳ ಹಿಸ್ಸಾ ಬಾಬ್ತು ಖರೀದಿಸಿದ್ದೇನೆ ಎಂದರೆ ಸಾಕ್ಷಿ ಯಲ್ಲಪ್ಪನ ಮಕ್ಕಳ ಹಿಸ್ಸಾ ಬಾಬ್ತು ಮತ್ತು ಗೋಣ್ಯಪ್ಪನ ಮಕ್ಕಳ ಹಿಸ್ಸಾ ಬಾಬ್ತು 2 ಎಕರೆ 30 ಗುಂಟೆ ಖರೀದಿಸಿದ್ದೇನೆ ಎಂದು ನುಡಿಯುತ್ತಾರೆ . ಸದರಿ 34 ರ ದಾಖಲೆಯಲ್ಲಿ ಗೋಣ್ಯಪ್ಪನ ಮಕ್ಕಳ ಪಕ್ಷಗಾರರು ಇದ್ದಾರಾ ಎಂದು ಪ್ರಶ್ನಿಸಿದ್ದಲ್ಲಿ ಸಾಕ್ಷಿ ಗೋಣ್ಯಪ್ಪನ ಮಗನಾದ ಹನುಮಂತಪ್ಪ ಮತ್ತು ಇನ್ನೊಬ್ಬನ ಮಗ ಪರಶುರಾಮಪ್ಪ ನ ಮಗ (ಗೋಣ್ಯಪ್ಪನ ಮೊಮ್ಮಗ)ಗೋಣ್ಯಪ್ಪ ಇಬ್ಬರು ಸಹಿ ಹಾಕಿದ್ದಾರೆ ಎಂದು ನುಡಿಯುತ್ತಾರೆ . ನಿಪಿ 35 ರಪ್ರಕಾರ ಪ್ರತಿವಾದಿಗಳ ವಂಶಸ್ಥರಿಗೆ ಸೇರಿದ ಹಿಸ್ಸೆಯನ್ನು ನಾಗಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಹೌದು ಎಂದುನುಡಿಯತ್ತಾರೆ. ಸದರಿ ದಾಖಲೆಯ ದಕ್ಷಿಣ ದಿಕ್ಕಿಗೆ ತೋರಿಸಿರುವ ಕೊಟ್ರಪ್ಪ ಕೂಡಾ ಪ್ರತಿವಾದಿ ವಂಶಸ್ಥ ಎಂದರೆ ಸರಿ .

ನಿಪಿ 36 ರಂತೆ ದಾಸಪ್ಪನ ಮಕ್ಕಳಾದ ಹನುಮಂತಪ್ಪ , ಕೊಟ್ರಪ್ಪರವರು ಯಲ್ಲಪ್ಪನ ಮೊಮ್ಮಕ್ಕಳ ಬಾಬ್ತು ಹಿಸ್ಸೆ ಎಂದು ಮಾರಾಟ ಮಾಡಿದ್ದಾರೆ ಎಂದರೆ ಸರಿ . ನಿಪಿ 37 ರಲ್ಲಿ ಪಹಣಿ ಪತ್ರಿಕೆಯಲ್ಲಿ ಕಾಣುವಂತಹ ಗೋಣ್ಯಪ್ಪ ಬಿನ್ ಹನುಮಂತಪ್ಪ ನಮ್ಮ ತಾಯಿಯ ತಂದೆ ಎಂದು ಸೂಚಿಸಿದರೆ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ . ನಿಪಿ 38 ರಿಂದ 42 ದಾಖಲೆಗಳು ಪ್ರತಿವಾದಿಗಳಿಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ . ನಾನು ಹಾಜರುಪಡಿಸಿರುವ ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸಾಕ್ಷಿ ಸಾಲುಬಾಳು ಗ್ರಾಮದಲ್ಲಿ ಸರ್ವೆ ನಂ 23 ನ್ನು ಮಾರಿಕೊಂಡು ಅಲ್ಲಿ ಆಸ್ತಿ ಮಾಡಿದ್ದಾರೆ ಎಂದುನುಡಿಯುತ್ತಾರೆ . ಸರ್ವೆ ನಂ 23 ರಲ್ಲಿ 2 ಎಕರೆ 14 ಗುಂಟೆ ಪ್ರತಿವಾದಿ ಉಳಿಸಿಕೊಂಡಿದ್ದಾರೆ ಎಂದೆರ ಸಾಕ್ಷಿ ಸದರಿ ಜಮೀನು ನನ್ನ ಅವ್ವನಿಗೆ ಕೊಟ್ಟಿರುವ ಹಿಸ್ಸಾ ಜಮೀನು ಆಗಿರುತ್ತದೆ . ಹಾಗಾಗಿ ಈ ದಾವೆಯನ್ನು ಹಾಕಿರುತ್ತೇನೆ ಎಂದು ನುಡಿಯುತ್ತಾರೆ .

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ಹೊನ್ನಾಳಿ.